ನಾನಾಗಿದ್ದರ ಬಗ್ಗೆ ನನಗೆ ಅಭಿಮಾನವಿದೆ. ಬಳಿಕ ಅದು 'ಮಾಪ್ಪಾಸೆಂಟ್' ಎಂದು ತುಚ್ಛೀಕರಿಸಿದ ಶುಂಕುಣ್ಣಿಯೊಡನೆ ಹೊಡೆದಾಟ ಮಾಡಿದ್ದಕ್ಕೆ ನನಗಿಂದಿಗೂ ಪಶ್ಚಾತ್ತಾಪವಿಲ್ಲ.

ಎರಡನೆಯ ವಿಶೇಷ: ಹಿಂಭಾಗದ ತಂತಿಗಳನ್ನು ಮೀಟಿದರೆ ಗೂಬೆ ಕಣ್ಣು ಹೊರಳಿಸುತ್ತಿತ್ತು. ಮಧ್ಯಾಹ್ನದ ಹೊತ್ತಲ್ಲಿ ಮಕ್ಕಳ ಎದುರಲ್ಲಿ ಗೂಬೆಯನ್ನು ಪ್ರದರ್ಶಿಸುವಾಗ ಅಜ್ಜಿ ಹೇಳಿದ ಮಾಯಾಕುದುರೆಯ ಒಡೆಯನಾದ ರಾಜಕುಮಾರನ ಕಥೆ ನನ್ನ ಮನಸ್ಸಿನಲ್ಲಿ ಇರುತ್ತಿತ್ತು. ಆ ಗೂಬೆ ನನ್ನ ಪ್ರಾಣವೇ ಆಗಿತ್ತು. ಬೇರೊಬ್ಬರಿಗೆ ಕೊಡಲು ಮನಸ್ಸಾಗುತ್ತಿರಲಿಲ್ಲ. ಅದರ ಮೆಕಾನಿಸಂ ಗೊತ್ತಿರುವುದು ನನಗೆ ಮಾತ್ರವೇ ಅಲ್ಲವೇ?

ನಾನು ಹೇಳಲಾರಂಭಿಸಿದ್ದು ಲೀಲಾಳ ಕುರಿತು. ಒಂದು ವಿಷಯ ಹೇಳುವುದಕ್ಕೆ ಬಿಟ್ಟು ಹೋಯಿತು. ರಬ್ಬರ್ ಗೂಬೆ ನನಗೆ ಉಡುಗೊರೆಯಾಗಿ ಕೊಟ್ಟುವವಳು ಲೀಲಾ.

ಬದುಕಿನಿಂದ ಹರಿದು ತೆಗೆದ ಒಂದು ಹಳೆಯ ತಾಳವಿದು.

ಗುಂಡಿ ಕಿತ್ತುಹೋದ ಮಾಸಿದ ಕಾಲುಪಟ್ಟಿಯನ್ನು ಸೊಂಟಕ್ಕೆ ಸಿಕ್ಕಿಸಿ ತಿರುಗುತ್ತಿದ್ದ ಕಾಲ. ಹತ್ತೋ ಹನ್ನೊಂದೋ ವರ್ಷ ಪ್ರಾಯವಿದ್ದಿರಬಹುದು. ಅಮ್ಮನಿಂದಲೂ, ಅಣ್ಣಂದಿರಿಂದಲೂ ಪೆಟ್ಟುಗಳು ಸಿಗುತ್ತಿದ್ದವು. ಅಮ್ಮಾಳು ಅಮ್ಮನ ಮಗ ವಾಸು ತುಂಬಾ ತಂಟೆಕೋರ ಎಂಬುದು ಬಹು ಜನರ ಅಭಿಪ್ರಾಯವಾಗಿತ್ತು. ಅದಕ್ಕೆ ಹೆಚ್ಚು ಪ್ರಚಾರ ನೀಡಿದವರು ನೆರೆಮನೆಯ ಪಾರು ಅತ್ತೆ. ಮಧ್ಯಾಹ್ನ ಅವರು ಮೆಲ್ಲನೆ ನಮ್ಮ ನಡುಮನೆಗೆ ಬರುತ್ತಿದ್ದರು. ಅಮ್ಮನ ತಲೆಯಿಂದ ಹೇನು ತೆಗೆಯುವಾಗ ಅತ್ತೆ ನಾಲ್ಕು ನೀತಿ ಪಾಠ ಹೇಳುತ್ತಿದ್ದರು. ಅದನ್ನು ಕೇಳುವುದು ನನಗಿಷ್ಟ. ನಂಬೂದಿರಿ ಮನೆಯ ಅಂತರ್ಜನವನ್ನು ಕುರಿತೊ, ಮುಟ್ಟಾಗಿ ಕುಳಿತಿರುವ ಹುಡುಗಿಯರ ಕುರಿತೊ ಹೇಳುತ್ತಿದ್ದರು. ಆದರೂ ಕೇಳುತ್ತ ಕುಳಿತುಕೊಳ್ಳುವುದರಲ್ಲಿಯೂ ಸ್ವಾರಸ್ಯವಿತ್ತು. ಅದರ ನಡುವೇ ಪಾರುವತ್ತೆ ಹೇಳುತ್ತಿದ್ದರು, 'ಮಗು, ನೀನು ಆ ಎಲೆಯಡಿಕೆ ಪೆಟ್ಟಿಗೆ ತೆಗೆದುಕೊಂಡು ಬಾ.'

ಅಂದೊಂದು ತೊಂದರೆ. ಅದನ್ನು ನಾನು

